28/1

# 2006

# ಕನ್ನಡ ಸಾಹಿತ್ಯ

## ಪತ್ರಿಕೆ 1

*ಸಮಯ : 3 ಗಂಟೆ ]* *[ ಗರಿಷ್ಠಾಂಕಗಳು : 300*

---

### ಸೂಚನೆಗಳು

*ವಿಭಾಗ* **A, B** *ಮತ್ತು* **C** *ಗಳಲ್ಲಿನ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಬೇಕು. ಆದರೆ ವಿಭಾಗ* **D** *ಯಲ್ಲಿ ಮೂರು ಪ್ರಶ್ನೆಗಳನ್ನಷ್ಟೇ ಆರಿಸಿ ಉತ್ತರಿಸಬೇಕು. ಪ್ರಶ್ನೆಗಳ ಅಂಕಗಳನ್ನು ಆಯಾ ವಿಭಾಗದ ಮುಂದೆಯೇ ನೀಡಲಾಗಿದೆ.*

*ಉತ್ತರಗಳು ಕನ್ನಡದಲ್ಲಿಯೇ ಇರತಕ್ಕದ್ದು. ಉತ್ತರಗಳ ಪದ ಮಿತಿಯನ್ನು ಮೀರದಂತೆ ಉತ್ತರಿಸಲು ಎಚ್ಚರ ವಹಿಸತಕ್ಕದ್ದು.*

[Turn over

## ಭಾಗ A

*4×5=20*

*ಒಂದೊಂದು ಪ್ರಶ್ನೆಗೂ 50 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**1.** (ಎ) ದಕ್ಷಿಣ ದ್ರಾವಿಡ ಭಾಷೆಗಳ ವಿಶಿಷ್ಟ ಲಕ್ಷಣಗಳನ್ನು ತಿಳಿಸಿ.

(ಬಿ) ವಡ್ಡಾರಾಧನೆಯ ಗದ್ಯದ ವೈಶಿಷ್ಟ್ಯವೇನು ?

(ಸಿ) 'ಮಾನಸಿಕ ದೂರ' ಎಂದರೇನು ?

(ಡಿ) ಹೊಯ್ಸಳ ವಾಸ್ತುಶಿಲ್ಪ ಶೈಲಿ ಅಥವಾ ಬಾದಾಮಿಯ ಗುಹಾ ದೇವಾಲಯ ಕುರಿತು ಟಿಪ್ಪಣಿ ಬರೆಯಿರಿ.

## ಭಾಗ B

*10×10=100*

*ಪ್ರತಿಯೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ.*

**2.** 'ಭಾಷೆ' ಎಂದರೇನು ? ವ್ಯಾಖ್ಯಾನದೊಂದಿಗೆ ವಿವರಿಸಿ.

**3.** ಪೂರ್ವದ ಹಳಗನ್ನಡದ ವಿಶಿಷ್ಟ ಲಕ್ಷಣಗಳನ್ನು ತಿಳಿಸಿ.

**4.** *ಭರತೇಶ ವೈಭವದ* ಮಹತ್ವ ಕುರಿತು ಟಿಪ್ಪಣಿ ಬರೆಯಿರಿ.

**5.** ಕಾವ್ಯದ ಉದ್ದೇಶ ಕುರಿತು ಟಿಪ್ಪಣಿ ಬರೆಯಿರಿ.

**6.** ಆಂಡಯ್ಯನ ಅಚ್ಚಗನ್ನಡ ಪ್ರಜ್ಞೆ ಕುರಿತು ಟಿಪ್ಪಣಿ ಬರೆಯಿರಿ.

**7.** ಸುನೀತ ಕುರಿತು ಟಿಪ್ಪಣಿ ಬರೆಯಿರಿ.

**8.** ಕನ್ನಡದಲ್ಲಿ ಲಿಂಗ ವ್ಯವಸ್ಥೆ ಕುರಿತು ಟಿಪ್ಪಣಿ ಬರೆಯಿರಿ.

**9.** ಧಾರ್ಮಿಕ ಹಿನ್ನೆಲೆಯಲ್ಲಿ *ಪಂಪಭಾರತ* ಕುರಿತು ಟಿಪ್ಪಣಿ ಬರೆಯಿರಿ.

**10.** ಕಿತ್ತೂರ ಚೆನ್ನಮ್ಮ ಹಾಗೂ ಸ್ವಾತಂತ್ರ್ಯ ಚಳುವಳಿ ಕುರಿತು ಟಿಪ್ಪಣಿ ಬರೆಯಿರಿ.

**11.** ಕರ್ನಾಟಕ ಏಕೀಕರಣ ಚಳುವಳಿ ಕುರಿತು ಟಿಪ್ಪಣಿ ಬರೆಯಿರಿ.

## ಭಾಗ C

*6×15=90*

*ಒಂದೊಂದು ಪ್ರಶ್ನೆಗೂ 150 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

*ಕೆಳಗಿನ ಪ್ರತಿ ವಿಷಯದ ಬಗ್ಗೆ ವಿವರಿಸಿ.*

**12.** ಕನ್ನಡದಲ್ಲಿ ಕಾಲ ವ್ಯವಸ್ಥೆ.

**13.** ಬಸವಣ್ಣನವರ ಅಭಿವ್ಯಕ್ತಿ ಶೈಲಿ.

**14.** 'ಕನ್ನಡ' ಪದ ನಿಷ್ಪತ್ತಿ.

**15.** ಕುವೆಂಪು ಅವರ ಮಹಾ ಛಂದಸ್ಸು.

**16.** ರಸ ಸಂಖ್ಯಾ ನಿರ್ಣಯ ಚರ್ಚೆ.

**17.** ಕರ್ನಾಟಕ ಸಂಸ್ಕೃತಿಯ ಪ್ರಾಚೀನತೆ.

## ಭಾಗ D

ಪ್ರತಿಯೊಂದು ಪ್ರಶ್ನೆಗೂ 300 ಶಬ್ದಗಳ ಮಿತಿಯಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 3×30=90

**18.** ಕನ್ನಡದಲ್ಲಿ ವಿಭಕ್ತಿ ವ್ಯವಸ್ಥೆಯನ್ನು ವಿವರಿಸಿ.

**19.** (ಎ) ದೇವರ ದಾಸಿಮಯ್ಯನ ವಚನ ವೈಶಿಷ್ಟ್ಯ.

(ಬಿ) ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಸಮಕಾಲೀನತೆ.

(ಸಿ) ಚಾಮರಸನ ಕಾವ್ಯ ಗುಣ.

(ಡಿ) ರನ್ನನ ಗದಾಯುದ್ಧದಲ್ಲಿ ನಾಟಕೀಯತೆ.

ಇವುಗಳಲ್ಲಿ ಯಾವುದಾದರೂ **ಎರಡನ್ನು** ಕುರಿತು ಬರೆಯಿರಿ.

**20.** ಕನ್ನಡ ಕಾವ್ಯದ ಆಧುನಿಕ ಛಂದೋಪ್ರಕಾರಗಳನ್ನು ವಿವರಿಸಿ.

**21.** ಶಾಸನಗಳಲ್ಲಿ ಕಂಡುಬರುವ ಕನ್ನಡ ಸಂಸ್ಕೃತಿಯ ಬಗೆಗೆ ಪ್ರಬಂಧ ಬರೆಯಿರಿ.

**22.** ಕನ್ನಡ ಪ್ರಾದೇಶಿಕ ಉಪಭಾಷೆಗಳನ್ನು ಅವುಗಳ ವಿಶಿಷ್ಟ ಲಕ್ಷಣ ಮತ್ತು ಉದಾಹರಣೆಗಳೊಂದಿಗೆ ವಿವರಿಸಿ.

28/2

# 2006

# ಕನ್ನಡ ಸಾಹಿತ್ಯ

## ಪತ್ರಿಕೆ 2

ಸಮಯ : 3 ಗಂಟೆ ]

[ ಗರಿಷ್ಠಾಂಕಗಳು : 300

### ಸೂಚನೆಗಳು

ವಿಭಾಗ **A, B** ಮತ್ತು **C** ಗಳಲ್ಲಿನ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಬೇಕು. ಆದರೆ ವಿಭಾಗ **D** ಯಲ್ಲಿ ಮೂರು ಪ್ರಶ್ನೆಗಳನ್ನಷ್ಟೇ ಆರಿಸಿ ಉತ್ತರಿಸಬೇಕು. ಪ್ರಶ್ನೆಗಳ ಅಂಕಗಳನ್ನು ಆಯಾ ವಿಭಾಗದ ಮುಂದೆಯೇ ನೀಡಲಾಗಿದೆ.

ಉತ್ತರಗಳು ಕನ್ನಡದಲ್ಲಿಯೇ ಇರತಕ್ಕದ್ದು. ಉತ್ತರಗಳ ಪದ ಮಿತಿಯನ್ನು ಮೀರದಂತೆ ಉತ್ತರಿಸಲು ಎಚ್ಚರ ವಹಿಸತಕ್ಕದ್ದು.

SEAL

[Turn over

## ಭಾಗ A

4×5=20

*ಈ ಕೆಳಗಿನ ಪದ್ಯಗಳ ಭಾವ ಮತ್ತು ಸ್ವಾರಸ್ಯವನ್ನು ವಿವರಿಸಿ.*

**1.** (ಎ) ಮೂಱಡಿ ಮಾಡಿದಂದು ನೆಲನೆಲ್ಲಮನಾ ಬಲಿಗಾದ ರೂಪಮಂ
ತೋಱಿದನೀ ಜಗತ್ರಯಮನೊರ್ಮೆಯೆ ನುಂಗುವ ಕಾಲರೂಪಮಂ
ತೋಱಿದನಂತೆ ರೌದ್ರತರ ರೂಪಮನೊರ್ಮೆಯೆ ವಿಶ್ವರೂಪಮಂ
ತೋಱಿದನಿರ್ದರಂ ನೆಱಿಯೆ ಮೋಹಿಸಿ ವೈಷ್ಣವದಿಂ ಮುರಾಂತಕಂ ||

(ಬಿ) ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ ಮುನಿದು
ಪೊಡವಿ ನುಂಗುವಡೆ ಮನೆ ತಾಂಗುವುದೇ ಕವಿದು ಹೆ
ಗ್ಗಡಲುಕ್ಕಿ ಜಗವ ಮೊಗೆವಡೆ ಮಳಿಗಳಡ್ಡ ಬಹವೇ ಹೇಳು ಮುನಿಪ ನಿನ್ನ |
ಬಡಬೋಧೆಗೀಧೆಗಳು ರಕ್ಷಿಸುವುವಲ್ಲ ನಾಂ
ಕಡುಮುಳಿದ ಬಳಿಕೆಲೇಗುವವು ನೀ ಹೇಳದಿ
ರ್ದಡೆ ಮದನಹರನಾಣೆ ಹೋಗೆಂದು ಕೌಶಿಕಂ ಜಱಿದನು ವಶಿಷ್ಠ ಮುನಿಯ ||

(ಸಿ) ಕಾವನಾತನೆ ಕೊಲುವನಾತನೆ
ಸಾವನಾತನೆ ಕೈಯ ಬಾಯಲಿ
ನೀವು ಪಾಂಡವರೊಡನೆ ಸುಖದಲಿ ರಾಜ್ಯ ಮಾಡುವುದು |
ಸಾವವರು ನಾವು ಅಂಜಿ ಬದುಕೆವು
ನೀವು ಚಿಂತಿಸಲೇಕೆ ನಿಮ್ಮನು
ಕಾವನೈ ಕರುಣದಲಿ ಗದುಗಿನ ವೀರನಾರಾಯಣ ||

(ಡಿ) ಸವಿದು ಮೆದ್ದರೋ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು ?
ಕವಣೆ ತಿರಿಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು ?
ಸವರಿ ಆನೆಯ ಸೊಂಡಲಿನ ರಣಕೊಂಬನಾರ್ ಭೋರ್ಗರೆದರೋ ?
ಸವೆದು ಸವೆಯದ ಸಾಹಸತ್ವದ ಕ್ಷಾತ್ರ ಬೇಟೆಯ ಮೆರೆದರೋ ?
ಅವರು ಸೋಲ್ ಸಾವರಿಯರು
ಅವರು ಕಡುಗಲಿ ಗರಿಯರು
ಅವರೆ ಕೊಡಗಿನ ಹಿರಿಯರು ||

## ಭಾಗ B

*10×10=100*

*ಒಂದೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**2.** ಪಂಪ ಭಾರತದಲ್ಲಿ ಭೀಷ್ಮನಿಗೆ ಪಟ್ಟ ಕಟ್ಟುವ ಸಂದರ್ಭದಲ್ಲಿ ದ್ರೋಣ-ಕರ್ಣರ ವಾಗ್ವಾದ ಸ್ವಾರಸ್ಯವನ್ನು ವಿವರಿಸಿ.

**3.** 'ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತೆನ್ನ ಭಕ್ತಿ' — ಈ ವಚನದ ತತ್ವಾರ್ಥವನ್ನು ವಿಶದೀಕರಿಸಿ.

**4.** ಸರ್ವಜ್ಞ ತಿಳಿಸುವ ಗುರುವಿನ ಲಕ್ಷಣಗಳಾವುವು ?

**5.** 'ಭರತ ಬದುಕಿಗೆ ಅಂಟಿಯೂ ಅಂಟದ ರಾಜಯೋಗಿ' — ಹೇಗೆ ? ವಿವರಿಸಿ.

**6.** ಹರಿಶ್ಚಂದ್ರ — ಹೊಲತಿಯರ ವಾದ ಸ್ವಾರಸ್ಯವನ್ನು ವಿವರಿಸಿ.

**7.** ಕನ್ನಡ ಭಾಷೆಯ ಹಿರಿಮೆಯನ್ನು ಹಿಂದಿನ ಕನ್ನಡ ಕವಿಗಳು ಹೇಗೆ ಶ್ರೇಷ್ಠೀಕರಿಸಿದ್ದಾರೆ ?

**8.** 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪ್ರಕೃತಿಯೂ ಒಂದು ಪಾತ್ರ ಹೇಗೆಂಬುದನ್ನು ವಿವರಿಸಿ.

**9.** ನವೋದಯ ಸಣ್ಣ ಕಥೆಗಳ ಧೋರಣೆಗಳನ್ನು ವಿವರಿಸಿ.

**10.** 'ಭಾರತೀಪುರ' ಒಂದು ವೈಚಾರಿಕ ಕಾದಂಬರಿಯೇ ? ಚರ್ಚಿಸಿ.

**11.** 'ಗರತಿಯ ಹಾಡು ನಮ್ಮ ಸ್ತ್ರೀ ಜೀವನದ ಒಳಗನ್ನಡಿ' — ವಿಮರ್ಶಿಸಿ.

[Turn over

## ಭಾಗ C

6×15=90

*ಒಂದೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**12.** 'ಆದಿ ಪುರಾಣ'ದ ನೀಲಾಂಜನೆಯ ನೃತ್ಯ ಪ್ರಸಂಗವನ್ನು ವಿವರಿಸಿ.

**13.** 'ಬಸವರಾಜ ದೇವರ ರಗಳೆ'ಯಲ್ಲಿ ಬಸವಣ್ಣನವರ ಜೀವನ ಚರಿತ್ರೆ ಎಷ್ಟು ಸಮರ್ಥವಾಗಿ ಪ್ರತಿಪಾದಿತವಾಗಿದೆ ?

**14.** ಕನ್ನಡ ಲಲಿತ ಪ್ರಬಂಧಗಳ ಸ್ವರೂಪ ಲಕ್ಷಣಗಳನ್ನು ವಿವರಿಸಿ.

**15.** 'ಬೆರಳ್ಗೆ ಕೊರಳ್' ನಾಟಕದಲ್ಲಿ ದ್ರೋಣರ ಪಾತ್ರವನ್ನು ವಿಮರ್ಶಿಸಿ.

**16.** 'ಚೋಮನ ದುಡಿ' ಒಂದು ದಲಿತ ಕಾದಂಬರಿಯೇ ? ಚರ್ಚಿಸಿ.

**17.** ಕನ್ನಡ ನವ್ಯ ಕಾವ್ಯದ ಸ್ವರೂಪ ಮತ್ತು ಧೋರಣೆಗಳನ್ನು ಚರ್ಚಿಸಿ.

## ಭಾಗ D

*3×30=90*

*ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಮೂರಕ್ಕೆ** ಉತ್ತರ ಬರೆಯಿರಿ. ಪ್ರತಿ ಪ್ರಶ್ನೆಗೂ 300 ಶಬ್ದಗಳ ಮಿತಿಯಲ್ಲಿ ಉತ್ತರ ಬರೆಯಬೇಕು.*

**18.** '*ವಿಕ್ರಮಾರ್ಜುನ ವಿಜಯ*' ಕಾವ್ಯದಲ್ಲಿ ಕೃಷ್ಣನ ಸಂಧಿ ಪ್ರಯತ್ನದ ನಾಟಕೀಯತೆಯನ್ನು ಚರ್ಚಿಸಿ.

**19.** 'ವಚನ ಸಾಹಿತ್ಯ' ಕನ್ನಡದಲ್ಲಿ ಒಂದು ವಿಶಿಷ್ಟ ಸಾಹಿತ್ಯ ಹೇಗೆ ? ವಿವರಿಸಿ.

**20.** ಹರಿಹರ, ಕುಮಾರ ವ್ಯಾಸ, ಪುಟ್ಟಪ್ಪ. ಅನಂತಮೂರ್ತಿ — ಇವರಲ್ಲಿ ಇಬ್ಬರ ವೈಶಿಷ್ಟ್ಯವನ್ನು ಚರ್ಚಿಸಿ.

**21.** '*ಉದ್ಯೋಗಪರ್ವ*'ದ ದುರ್ಯೋಧನ, '*ಚೋಮನ ದುಡಿ*'ಯ ಚೋಮ, '*ಗರತಿಯ ಹಾಡು*'ಗಳಲ್ಲಿಯ ಕನ್ನಡತಿ, ಕನ್ನಡ ಸಣ್ಣಕತೆಗಳ ಆಶಯ — ಇವುಗಳಲ್ಲಿ ಎರಡರ ಬಗ್ಗೆ ಬರೆಯಿರಿ.

**22.** ಕನ್ನಡ ಗಾದೆಗಳು, ಕನ್ನಡ ಒಗಟುಗಳು, ಜನಪದ ಕತೆಗಳ ವಸ್ತು — ಇವುಗಳಲ್ಲಿ ಎರಡರ ಬಗ್ಗೆ ವಿವರವಾಗಿ ಬರೆಯಿರಿ.